GRANT OF LOAN FOR SINKING IRRIGATION WELLS IN KANAKAPURA TALUK.

*Q.—30. Sri S. KARIAPPA (Virupakshipur).—

Will the Government be pleased to state.—

(*a*) the number of applications received for grant of loan and subvention under liberalised rules for sinking of irrigation wells during the current year in Kanakapura Taluk ;

(*b*) the number of cases in which loan and subvention was sanctioned ;

(*c*) the amount paid for the sanctioned wells so far ;

(*d*) the amount required for the remaining cases ;

(*e*) the amount that had been allotted for the purpose ?

A.—Sri KADIDAL MANJAPPA (Minister for Revenue).—

(*a*) 449.

(*b*) 424. In 424 cases, loan has been sanctioned. The question of subsidy will arise only after the well work is satisfactorily completed.

(*c*) Rs. 1,62,000 in respect of the 375 cases.

(*d*) Rs. 40,000 in respect of the remaining 49 cases.

(*e*) Rs. 2,00,000.

ಶ್ರೀ ಎಸ್. ಕರಿಯಪ್ಪ.—ಇನ್ನು ಮುಂದೆ ಈ ಇರಿಗೇಷನ್ ವೆಲ್‌ಗಳಿಗೆ ಸಾಲಕ್ಕಾಗಿ ಅರ್ಜಿ ಬಂದರೆ ಅವುಗಳನ್ನು ಅಂಗೀಕರಿಸಬಾರದೆಂದು ಸರ್ಕಾರದವರೇನಾದರೂ ಹುಕುಂ ಮಾಡಿದ್ದಾರೆಯೇ ?

†ಶ್ರೀ ಕಡಿದಾಳ್ ಮಂಜಪ್ಪ.—ಮುಂದಿನ ಸಾಲಿನಿಂದ ಈ ರೋನನ್ನು ನಿಲ್ಲಿಸಲಾಗುತ್ತೆಂತ ತಿಳುವಳಿಕೆ ಕೊಡಲಾಗಿದೆ. ಕಾರಣವೇನೆಂದರೆ ನಮ್ಮಲ್ಲಿ ಸಾಕಷ್ಟು ಹಣವಿಲ್ಲ.

ಶ್ರೀ ಎಸ್. ಕರಿಯಪ್ಪ.—ಸಾಲಕ್ಕಾಗಿ ಬಂದಿರುವ ಅರ್ಜಿಗಳಲ್ಲಿ ಇನ್ನೂ 600 ಅರ್ಜಿಗಳು ಹಾಗೇ ಇರುತ್ತವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಈಗಾಗಲೇ 400 ಚಿಲ್ಲರೆ ಅರ್ಜಿಗಳನ್ನು ಮಂಜೂರು ಮಾಡಲಾಗಿದೆ.

ಶ್ರೀ ಎಸ್. ಕರಿಯಪ್ಪ.—ಆದಾಗ್ಯೂ ಇನ್ನೂ ಮಂಜೂರಾಗದೆ ಹಾಗೇ 600 ಅರ್ಜಿಗಳು ಇರುತ್ತೆಂಬುದು ತಮಗೆ ಗೊತ್ತಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇರಬಹುದು.

ಶ್ರೀ ಎಸ್. ಕರಿಯಪ್ಪ.—ಈ ತಾಲ್ಲೂಕಿನಲ್ಲಿರತಕ್ಕ ಜಮೀನುಗಳೆಲ್ಲ ಖುಷ್ಕಿ ಜಮೀನುಗಳಾಗಿರುವುದರಿಂದ ಈ ಪ್ರದೇಶದಲ್ಲಿ ಮುಂದೆ ಕ್ಷಾಮ ಬಾರದಿರುವಂತೆ ಏನಾದರೂ ಪ್ರಯತ್ನ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಈಗಾಗಲೇ ನಾವು ಅಂಗೀಕರಿಸಿರುವ ಅರ್ಜಿಗಳಿಗೆ ಕೊಡಬೇಕಾದ ಹಣ 4 ಕೋಟಿ 75 ಲಕ್ಷಕ್ಕೆ ಬರುತ್ತೆ. ಇದಕ್ಕಿಂತ ಹೆಚ್ಚಿಗೆ ಅನುಕೂಲ ಯಾವ ವರ್ಷದಲ್ಲೂ ನಡೆದಿಲ್ಲ. ದುಡ್ಡಿದ್ದಿದ್ದರೆ ಮಾಡಬಹುದಾಗಿತ್ತು.

ಶ್ರೀ ಎಂ. ಕೆ. ಬೊಮ್ಮೇಗೌಡ.—ಕೇಂದ್ರ ಸರ್ಕಾರದಿಂದ ಬಂದ ಎರಡು ಕೋಟಿ ರೂಪಾಯಿಗಳೂ ಖರ್ಚಾಗಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೂ ಮೇಲೆ ಖರ್ಚಾಗಿದೆ.

Sri G.B. SHANKAR RAO.–Are Government aware that this amount of loan has not been placed at the disposal of the Deputy Commissioners of other districts ?

Sri KADIDAL MANJAPPA.—No, no. The amount was placed at the disposal of Deputy Commissioners of other districts also.

Sri C.J. MUCKANNAPPA.—In view of the draught in the majority areas or parts of the State, will Government consider to make adequate provision in the forthcoming Budget?

Sri KADIDAL MANJAPPA.—After considering all that, we made provision for sinking 15,000 wells. At no time in the history of the State, such a programme had been undertaken.

Sri C.J. MUCKANNAPPA.—Sir, I did not get answer to my question. My question is, whether the Government will consider the feasibility of providing more adequate money for sinking of wells in the forthcoming budget for the draught areas in the State.

ಅಧ್ಯಕ್ಷರು.—ಹಾಗಾದರೆ ಮಾನ್ಯ ಸದಸ್ಯರು ಮಂತ್ರಿಗಳಿಗೆ ಮುಂದೆ ಬರತಕ್ಕ ಬಜೆಟ್ಟಿನಲ್ಲಿರುವ ವಿಚಾರವನ್ನು ತಿಳಿಸಿ, ಅವರನ್ನು ಮನೆಗೆ ಕಳುಹಿಸಬೇಕೆಂದಿದ್ದೀರಾ ?

Sri P.G. SIDHANTI.—Will Government be pleased to extend the scheme in future years for scarcity areas.

Sri KADIDAL MANJAPPA.—It is a suggestion for action. We will take into account the wishes of the Hon'ble Member.

ಶ್ರೀ ಎಂ. ಲಿಂಗೇಗೌಡ.—ಕನಕಪುರ ತಾಲ್ಲೂಕಿನಲ್ಲಿ ತೆಗೆಸುವ ಬಾವಿಗಳಿಗೆಲ್ಲ ಒಟ್ಟು ಎಷ್ಟು ಹಣ ಖರ್ಚಾಗಿರುತ್ತೆ ?

ಶ್ರೀ ಕಡಿದಾಳ್ ಮಂಜಪ್ಪ.—ನಾಲ್ಕು ಲಕ್ಷಕ್ಕೆ ಮೇರಾಗುತ್ತದೆ.

ಶ್ರೀ ಎಂ. ಲಿಂಗೇಗೌಡ.—ಕನಕಪುರ ತಾಲ್ಲೂಕಿನಲ್ಲಿ 424 ಬಾವಿಗಳನ್ನು ಮಂಜೂರು ಮಾಡಿ ಆ ಪೈಕಿ 375 ಬಾವಿಗಳ ಕೆಲಸವನ್ನು ಕೈಗೊಂಡು ಉಳಿದ ಬಾವಿಗಳ ಕೆಲಸವನ್ನೇಕೆ ಹಾಗೆ ಕೈಬಿಡರಾಗಿದೆ.

ಶ್ರೀ ಕಡಿದಾಳ್ ಮಂಜಪ್ಪ.—ಹಣವಿಲ್ಲ. ಈಗಾಗಲೇ ನಾವು ಒಪ್ಪಿಕೊಂಡಿರುವ ಅರ್ಜಿಗಳ ಬಗ್ಗೆ ನಾಲ್ಕು ಕೋಟಿ ರೂಪಾಯಿಗಳನ್ನು ತೆರಬೇಕಾಗಿದೆ. ಈ ಹಣವನ್ನು ಹೇಗೆ ಭರ್ತಿ ಮಾಡುವುದೆಂಬುದನ್ನು ಸರ್ಕಾರದವರು ತೀವ್ರವಾಗಿ ಪರಿಶೀಲನೆ ಮಾಡುತ್ತಿದ್ದಾರೆ.

ಶ್ರೀ ಎಂ. ಲಿಂಗೇಗೌಡ.—ಈ ತಾಲ್ಲೂಕಿನಲ್ಲಿ ಮಳೆ ಬೆಳೆಗಳಾಗದೆ ಆಗಿಂದಾಗ್ಗೆ ಕೊಂದರೆ ಗೀಡಾಗುತ್ತಿರುವುದರಿಂದ, ಈ ವರ್ಷ ನಾರ್ಮಲ್ ಬೆಳೆ ಸಹ ಆಗಿಲ್ಲದಿರುವುದರಿಂದ ಈಗ ಪೆಂಡಿಂಗ್ ಇರುವ ಅರ್ಜಿಗಳನ್ನೂ ಸಹ ಅಂಗೀಕರಿಸಲು ಸರ್ಕಾರದವರು ಮನಸ್ಸುಮಾಡುವರೇ?

ಶ್ರೀ ಕಡಿದಾಳ್ ಮಂಜಪ್ಪ.—ಹಣವಿದ್ದಿದ್ದರೆ ಆಗಬಹುದಾಗಿತ್ತು. ಈಗ ಕಮಿಟ್ ಮಾಡಿಕೊಂಡು ಪೆಂಡಿಂಗ್ ಇರುವ ಅರ್ಜಿಗಳಿಗೆ ಹಣ ಒದಗಿಸಿದರೆ ಸಾಕಾಗಿದೆ.

ಶ್ರೀ ಎಂ. ಲಿಂಗೇಗೌಡ.—ಸರ್ಕಾರದವರು ಈ ಸ್ಕೀಮನ್ನು ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ ತೆಗೆದುಕೊಂಡಿದ್ದಾರೋ, ಅಥವಾ ಹೇಗೆ ಮಾಡಿದ್ದಾರೆ ?

ಶ್ರೀ ಕಡಿದಾಳ್ ಮಂಜಪ್ಪ.—ಮೈಸೂರು ಜಿಲ್ಲೆಯಲ್ಲಿ ಮಾತ್ರ ಜಿಲ್ಲಾ ಲೆವಲ್‌ನಲ್ಲಿ ಈ ಕೆಲಸವನ್ನು ಕೈಗೊಳ್ಳಲಾಗಿದೆ.

Sri G.B. SHANKAR RAO.—What orders have been issued by Government in respect of taking security from the agriculturists to sanction takavi loans under these rules ?

Sri KADIDAL MANJAPPA.—Detailed instructions have been issued and those instructions are very liberal and helpful to the ryots.

Sri G.B. SHANKAR RAO.—Is it on the basis of assessment of land or market value of the land.

Sri KADIDAL MANJAPPA.—In the case of Bombay area, I do not know wheather that question will arise.

Mr. SPEAKER.—It does not arise.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ.—ವಿಜಾಪುರ ಜಿಲ್ಲೆಗೆ ಎಷ್ಟು ಹಣ ಮಂಜೂರು ಮಾಡಿದ್ದೀರಿ ? ಎಷ್ಟು ಬಾವಿಗಳ ಕೆಲಸ ನಡೆದಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ಈ ಪ್ರಶ್ನೆ ಜನರಲ್ ಆಗಿ ಕೇಳಿದ್ದರೆ ನಾನೂ ಜನರಲ್ ಆಗಿ ಉತ್ತರ ಕೊಡಬಹುದಾಗಿತ್ತು. ಈಗ ಆ ವಿವರಗಳು ನನ್ನಲ್ಲಿಲ್ಲ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಇದೀ ಮೈಸೂರು ರಾಜ್ಯಕ್ಕೆ ಮಂಜೂರು ಮಾಡಿದಷ್ಟು ಬಾವಿಗಳನ್ನು ಕೇವಲ ಈ ಒಂದು ಜಿಲ್ಲೆಗೆ ಮಂಜೂರು ಮಾಡಲು ಇದ್ದ ಅಂಥ ಮಹತ್ವದ ಕಾರಣಗಳೇನು ?

ಶ್ರೀ ಕಡಿದಾಳ್ ಮಂಜಪ್ಪ.—ಕನಕಪುರ ತಾಲ್ಲೂಕಿನಲ್ಲಿ ಈ ಸ್ಕೀಮು ಹೊಸದಾಗಿ ಪ್ರಾರಂಭವಾದಾಗ ಮತ್ತು ಅದಕ್ಕೂ ಮುಂಚಿತವಾಗಿ ಬೆಂಗಳೂರು ಜಿಲ್ಲಾ ಅಧಿಕಾರಿಗಳು ಈ ವಿಚಾರದಲ್ಲಿ ಹೆಚ್ಚು ಆಸಕ್ತಿ ವಹಿಸಿ 15 ಲಕ್ಷಕ್ಕೆ ಅಂದಾಜು ಮಾಡಿದ್ದರು. ಅದಕ್ಕಾಗಿ ಈ ಜಿಲ್ಲೆಗೆ ಸ್ವಲ್ಪ ಹಣವನ್ನು ಜಾಸ್ತಿ ಕೊಡಲಾಗಿದೆ.

ಶ್ರೀ ಸಿ.ಕೆ. ರಾಜಯ್ಯಶೆಟ್ಟಿ.—ಕ್ಷಾಮಪೀಡಿತ ಪ್ರದೇಶಗಳಿಗೆಲ್ಲ ಒಂದೇ ಪಾಲಸಿ ಇರುವುದರಿಂದ ಈ ತಾಲ್ಲೂಕಿನಲ್ಲಿ ಅಂಥಾ ಕ್ಷಾಮಡಾಮರದ ಚಿಹ್ನೆಗಳಿರುತ್ತವೆ ?

ಶ್ರೀ ಕಡಿದಾಳ್ ಮಂಜಪ್ಪ.—ಈ ತಾಲ್ಲೂಕಿನಲ್ಲೂ ಹಂಗಾಮಿ ಕ್ಷಾಮದ ಕೊಂದರೆ ಇರುತ್ತದೆ.

———

AMOUNT DERIVED FROM THE SALE OF AMARAI IN THE VILLAGES OF KANAKAPURA TALUK.

*Q.—51. Sri M. LINGEGOWDA (Kanakapura).—

Will the Government be pleased to state:—

(*a*) the number of tamarind and honge trees that come under Amarai, in the villages of Hanumanahalli and Ramohalli in Kanakapura Taluk.

(*b*) the amount that the Government has derived from the sale of Amarai, during the last three years.